ಸಿ.ಸಿ .ನಂ. 40/2023 ಪಿಡಬ್ಲ್ಯೂಃ 1

ದಿನಾಂಕಃ 05-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

3. ನಮ್ಮ ಸಂಸ್ಥೆಗೆ ಒಂದು ಸಾಲದ ಅರ್ಜಿ ಬಂದಾಗ ಅದನ್ನು ಪರಿಶೀಲನೆ ಮಾಡಿ ಆಡಳಿತ ಮಂಡಳಿಗೆ ಕಳುಹಿಸಬೇಕಾಗುತ್ತದೆ ಎಂದರೆ ಸರಿ . ಈ ಸಾಲದ ಅರ್ಜಿಯನ್ನು ಕೂಡ ಆಡಳಿತ ಮಂಡಳಿಯ ಮುಂದೆ ಇಟ್ಟು ಮಂಜೂರಾಗಿರುವ ಸಾಲದ ಅರ್ಜಿ ಎಂದರೆ ಸರಿ . ನಮ್ಮ ಸಂಸ್ಥೆಯಲ್ಲಿ ಪ್ರತಿ ತಿಂಗಳು ಆಡಳಿತ ಮಂಡಳಿಯ ಸಭೆ ನಡೆಯುತ್ತದೆ . ಈ ಪ್ರಕರಣದಲ್ಲಿಯ ಸಾಲದ ಅರ್ಜಿ ದಿಃ 30-03-2019 ರಂದು ಮಂಜೂರಾಗಿರುತ್ತದೆ . ಆ ರೀತಿಯಾದ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ . ಆ ಮಂಜೂರಾದ ದಾಖಲಾತಿಗಳನ್ನು ನೋಡಿದರೆ ಮಾತ್ರ ಆ ದಿನ ಸಾಲ ಮಂಜೂರಾದ ಬಗ್ಗೆ ಗೊತ್ತಾಗುತ್ತದೆ ಎಂದರೆ ಸಾಕ್ಷಿ ಬಾಂಡ್ ಹಾಗೂ ಕರಾರಿನಲ್ಲಿ ಸಾಲ ಮಂಜೂರಾದ ಬಗ್ಗೆ ನಮೂದಿದೆ ಎಂದು ನುಡಿದಿರುತ್ತಾರೆ . ನಮ್ಮ ಬ್ಯಾಂಕಿನಲ್ಲಿ ಸಾಲವನ್ನು ನೀಡುವಾಗ ಬೇರೆ ಬ್ಯಾಂಕಿನವರು ಸಾಲವನ್ನು ನೀಡಿದ್ದಾರಾ ಪರಿಶೀಲನೆ ಮಾಡಿ ಸಾಲ ನೀಡುತ್ತೇವೆ ಎಂದರೆ ಸರಿ . ಈ ಸಾಲದ ಅರ್ಜಿ ಬಂದಾಗ ಆರೋಪಿ ಬೇರೆ ಬ್ಯಾಂಕಿನಲ್ಲಿ ಸಾಲ ಪಡೆದ ಬಗ್ಗೆ ನಾವು ಪರಿಶೀಲನೆ ಮಾಡಿಲ್ಲ . ಸಾಲದ ಅರ್ಜಿಯಲ್ಲಿರುವ ಬರವಣಿಗೆಯನ್ನು ನಮ್ಮ ಸಿಬ್ಬಂದಿಯವರೇ ಮಾಡಿರುತ್ತಾರೆ ಎಂದರೆ ಸರಿ . ಸಾಲದ ಅರ್ಜಿಗೆ ಸಂಬಂಧಪಟ್ಟಂತೆ ಸಾಲದ ಅರ್ಜಿ, ಕರಾರು, ಡಿಮಾಂಡ ಪ್ರಾಮಿಸರಿ ನೋಟ್ ಪಡೆದುಕೊಂಡಿದ್ದೇವೆ . ಸಾಲದ ಭದ್ರತೆಗಾಗಿ ಯಾವುದೇ ದಾಖಲಾತಿ ಪಡೆದಿಲ್ಲ . ನಮ್ಮ ಸಂಸ್ಥೆಯಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಸಾಲವನ್ನು ಮಂಜೂರು ಮಾಡುವಂತಿಲ್ಲ ಎಂದರೆ ಸರಿಯಲ್ಲ . ನಾವು ಪಡೆದುಕೊಂಡಿರುವ ದಾಖಲಾತಿಗಳನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿಲ್ಲ . ನಮ್ಮ ಸಾಲದ ಅರ್ಜಿಯಲ್ಲಿ ಭದ್ರತೆಗೆಂದು ಕೆಲವು ದಾಖಲಾತಿಗಳನ್ನು ಪಡೆದುಕೊಳ್ಳಬೇಕೆಂದು ಕಾಲಂ ಇದೆ ಎಂದರೆ ಸರಿ . ಸಾಲದ ಅರ್ಜಿಗೆ ಸಂಬಂಧಪಟ್ಟಂತೆ ಭದ್ರತೆಗೆ ಯಾವುದೇ ದಾಖಲಾತಿಯನ್ನು

ಪಿಡಬ್ಲೂಃ 1

ಪಡೆದುಕೊಂಡಿಲ್ಲ. ಹೆಚ್ಚಿನ ಮೊತ್ತದ ಸಾಲವನ್ನು ನೀಡುವ ಸಂದರ್ಭದಲ್ಲಿ ನಾವು ಆಡಳಿತ ಮಂಡಳಿಯಮರು ಈ ರೀತಿಯ ದಾಖಲಾತಿಯನ್ನು ಪಡೆದುಕೊಳ್ಳಬೇಕು ಎಂದರೆ ಸರಿ . ಆರೋಪಿ ಅವರ ವ್ಯವಹಾರದ ಉದ್ದೇಶಕ್ಕೆ ಸಂಬಂಧಪಟ್ಟಂತೆ ಸಾಲದ ಅರ್ಜಿಯನ್ನು ಸಲ್ಲಿಸಿದ್ದರು . ಸಾಲದ ಅರ್ಜಿಯಲ್ಲಿಯೂ ಸಹ ಸಾಲದ ವ್ಯವಹಾರಕ್ಕೆ ಸಂಬಂಧಪಟ್ಟ ವಿವರಗಳನ್ನು ನಮೂದು ಮಾಡುತ್ತೇವೆ ಎಂದರೆ ಸರಿ . ವ್ಯವಹಾರಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿಯಲ್ಲ. ವ್ಯವಹಾರಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ತೆಗೆದುಕೊಳ್ಳಲೇ ಬೇಕು ಅಂತಾ ಇಲ್ಲ. ಸಾಲದ ಅರ್ಜಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿಲ್ಲ ಕಾರಣ ಸಾಲ ಮಂಜೂರಾಗಿಲ್ಲ ಎಂದರೆ ಸರಿಯಲ್ಲ . ವ್ಯವಹಾರಕ್ಕೆ ಸಂಬಂಧಪಟ್ಟಂತೆ ಎಲ್ಲೂ ಕೂಡ ಸಾಲದ ಅರ್ಜಿಯಲ್ಲಿ ನಮೂದಾಗಿಲ್ಲ ಎಂದರೆ ಸರಿ .

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.